**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/65/ಸುತ್ತೋಲೆ/ಆಯವ್ಯಯ/2017-18

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ**
ಅರಮನೆರಸ್ತೆ, ಬೆಂಗಳೂರು-560001
ದಿನಾಂಕ:23.08.2017.

## ಸುತ್ತೋಲೆ

**ವಿಷಯ:** ದಿನಾಂಕ: 01.01.2006ರ ನಂತರ ನೇಮಕಾತಿ/ಯುಜಿಸಿ ವಿಸ್ತರಣೆ ಹೊಂದಿರುವ ಬೋಧಕರಿಗೆ ಪಾವತಿಸಿರುವ ಯುಜಿಸಿ ಹಿಂಬಾಕಿಯನ್ನು ವಸೂಲಾತಿ ಬಗ್ಗೆ.

**ಉಲ್ಲೇಖ:** ಈ ಕಛೇರಿಯ ವಿವಿಧ ದಿನಾಂಕಗಳ ಯುಜಿಸಿ ಹಿಂಬಾಕಿ ಪಾವತಿಗೆ ಅನುದಾನ ಬಿಡುಗಡೆ ಮಾಡಿರುವ ಆದೇಶಗಳು(2014-15 ರಿಂದ 2016-17ನೇ ಸಾಲಿನ ಅವಧಿಯಲ್ಲಿ)

*******

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಗೆ ಒಳಪಡುವ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಅಧ್ಯಾಪಕರುಗಳಿಗೆ ಯುಜಿಸಿ ಹಿಂಬಾಕಿ ಮೊತ್ತವನ್ನು ಪಾವತಿಸುವ ಸಂಬಂಧ ಸರ್ಕಾರದಿಂದ 2014-15ನೇ ಸಾಲಿನಿಂದ 2016-17ನೇ ಸಾಲಿನವರೆವಿಗೆ ಒದಗಿಸಿರುವ ಅನುದಾನದಲ್ಲಿ ದಿನಾಂಕ:01.01.2006ರ ಪೂರ್ವದಲ್ಲಿ ಇದ್ದಂತಹ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿರುವ/ಕಾರ್ಯನಿರ್ವಸುತ್ತಿರುವ ಬೋಧಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ಬೋಧಕರುಗಳಿಗೆ ಮಾತ್ರ ಪಾವತಿಸಲು ತಿಳಿಸಲಾಗಿರುತ್ತದೆ. ಆದರೆ ದಿನಾಂಕ:01.01.2006ರ ನಂತರ ನೇಮಕಾತಿ/ಯುಜಿಸಿ ವೇತನ ಶ್ರೇಣಿ ವಿಸ್ತರಣೆ ಹೊಂದಿರುವ ಬೋಧಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ಬೋಧಕರುಗಳಿಗೆ ಯುಜಿಸಿ ಹಿಂಬಾಕಿ ಮೊತ್ತವನ್ನು ಪಾವತಿಸಿರುವುದು ಕಂಡುಬಂದಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ:01.01.2006 ರಿಂದ ದಿ:31.03.2010 ರ ಅವಧಿಯಲ್ಲಿ ನೇಮಕಾತಿ ಹೊಂದಿರುವ/ನೇಮಕಾತಿ ಹೊಂದಿ ಯುಜಿಸಿ ವೇತನ ಶ್ರೇಣಿ ವಿಸ್ತರಣೆ ಮಾಡಿರುವ ಬೋಧಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ಬೋಧಕರುಗಳಿಗೆ ಈ ಅವಧಿಯಲ್ಲಿ ಪಾವತಿಸಿರುವ ಯುಜಿಸಿ ಹಿಂಬಾಕಿ ಮೊತ್ತವನ್ನು ಕೂಡಲೇ ವಸೂಲು ಮಾಡಿ ಸರ್ಕಾರದ ಲೆಕ್ಕಶೀರ್ಷಿಕೆ:0202-01-103-1-02ಕ್ಕೆ ಜಮೆ ಮಾಡುವಂತೆ ಸೂಚಿಸಲಾಗಿದೆ.

ವಸೂಲಾತಿ ಮಾಡಿ ಜಮೆ ಮಾಡಿರುವ ಮಾಹಿತಿಯನ್ನು ದಿನಾಂಕ: 01.09.2017ರೊಳಗೆ ಈ ಕಛೇರಿಯ ಇಮೇಲ್ ವಿಳಾಸ: dcebang.budget@gmail.comಕ್ಕೆ ಸಾಫ್ಟ್‌ಕಾಪಿಯನ್ನು ಹಾಗೂ ಹಾರ್ಡ್‌ಕಾಫಿಯನ್ನು ಈ ಕಛೇರಿಗೆ ಸಲ್ಲಿಸುವುದು.

**ಕಾಲೇಜು ಶಿಕ್ಷಣ ಆಯುಕ್ತರು**

**ಇವರಿಗೆ:**

1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಧಾರವಾಡ, ಕಲಬುರಗಿ ಹಾಗೂ ಮಂಗಳೂರು – **ತಮ್ಮ ಕಛೇರಿ ವ್ಯಾಪ್ತಿಯ ಅನುದಾನಿತ ಪದವಿ ಕಾಲೇಜುಗಳ ಕ್ರೋಢೀಕೃತ ಮಾಹಿತಿಯನ್ನು ದಿನಾಂಕ:04.09.2017ರಂದು ಕೇಂದ್ರಕಛೇರಿಯಲ್ಲಿ ನಡೆಯುವ ಸಭೆಯಲ್ಲಿ ಹಾಜರುಪಡಿಸುವುದು.** .
2) ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ– ಅಗತ್ಯ ಕ್ರಮಕ್ಕಾಗಿ
3) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಲೆಕ್ಕಾಧಿಕಾರಿಗಳಿಗೆ ಅಗತ್ಯಕ್ರಮಕ್ಕಾಗಿ.
4) ಮಾಹಿತಿ ಅಧಿಕಾರಿಗಳು: ಮಾಹಿತಿ ವಿಭಾಗ ಕೇಂದ್ರ ಕಛೇರಿ ಬೆಂಗಳೂರು – ಮೇಲ್ಕಂಡ ಸುತ್ತೋಲೆಯನ್ನು ಇಲಾಖಾ ಅಂತರ್ಜಾಲದಲ್ಲಿ ಅಳವಡಿಸಲು